ಧ್ವನಿ ಕತೆಯಲ್ಲಿದೆ. ಇವರೆಡೂ ಕತೆಗಳಿಗೆ ಪತ್ರಿಕಾ ವರದಿಗಳೇ ಸ್ಫೂರ್ತಿ ನೀಡಿವೆ.

ಕಂಡದ್ದೋ ಕೇಳಿದ್ದೋ ಅನುಭವಿಸಿದ್ದೋ ಏನೇ ಇರಲಿ ಕತೆ ಎಂದರೆ ಬದುಕಿನ ಲೋಕದ ವ್ಯಾಖ್ಯಾನ. ಕತೆ ಬರೆಯಲು ಯಾರಿಗೂ ಮೊದಲೊಂದು ದೃಷ್ಟಿಕೋನ ಬೇಕು. ಬದುಕನ್ನು ನೋಡುವ ಗ್ರಹಿಸುವ ವಿಧಾನದಿಂದಲೇ ಕತೆಗಾರರಲ್ಲಿ ತಾತ್ವಿಕತೆಯೊಂದು ರೂಪಗೊಳ್ಳುತ್ತದೆ. ಇದಿರದಿದ್ದರೆ, ಕತೆಗೆ ತ್ರಾಣವೇ ಇರುವುದಿಲ್ಲ. ಏನೇ ವಸ್ತುವಾಗಲಿ ತಾಜಾ ಕಲ್ಪನೆ ನಿರೂಪಣಾ ಶೈಲಿ ಬಹುಮುಖ್ಯವೆಂಬುದು ನನ್ನ ಅನಿಸಿಕೆ. ನಾನು ಗುಲ್ಬರ್ಗದಲ್ಲಿ ನೌಕರಿ ಮಾಡುತ್ತಿದ್ದಾಗ ಚಿಂಚೋಳಿ ತಾಲ್ಲೂಕಿನ ಹದಳಗಿ ಗ್ರಾಮದಲ್ಲಿ ಪಂಚ ದಲಿತ ಕನ್ಯೆಯರ ಬೆತ್ತಲೆ ಸೇವೆಯನ್ನು (ಮಳೆ ಬಾರದಿದ್ದಾಗ) ರಾತ್ರಿ ವೇಳೆ ನಡೆಸುತ್ತಿದ್ದುದನ್ನು ನೋಡಲು ಎಲ್ಲರಂತೆ ನಾನೂ ಕುತೂಹಲದಿಂದ ಹೋಗಿದ್ದೆ. ಅಪಾರ ಜನಸಂದಣಿ ನೂಕುನುಗ್ಗಲು. ಕಾರಿನಲ್ಲೂ ಜನರು ಬಂದಿಳಿದರು. ಇದು ಆಗಿದ್ದು 1970–71ರಲ್ಲಿ. ಅಸಹ್ಯವೆನ್ನಿಸಿದ್ದು ಆಗಲೆ. ಮಳೆಗಾಗಿಯೋ ಮೋಜಿಗಾಗಿಯೋ ದಲಿತ ಕನ್ಯೆಯರೇ ಆಗಬೇಕೆ ಎಂಬ ಪ್ರಶ್ನೆ ಕಾಡಿದಾಗ ಹೋಗಿದ್ದು ಅಪರಾಧವೆನ್ನಿಸಿತು. ನಾನಾಗ ಬರಹಗಾರನಾಗುವ ಚಡಪಡಿಕೆಯಲ್ಲಿದ್ದೆ. ಈ ಘಟನೆ ಕತೆಯಾಗಿದ್ದು 1979ರಲ್ಲಿ. 'ಬೆತ್ತಲೆ ಸೇವೆ' ಎಂಬ ಈ ಕತೆಗೆ 'ಪ್ರಜಾಮತ' ಕಾದಂಬರಿ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನವೂ ಬರಬೇಕೆ! ಇದನ್ನು ಓದಿದ ಲೇಖಕ ಹಾ.ಮಾ. ನಾಯಕ ಅವರು ಕತೆ ಹರವು ದೊಡ್ಡದು. ಇದನ್ನು ಕಾದಂಬರಿ ಮಾಡಿ ಎಂದು ಪುಟ್ಟ ಕಾರ್ಡ್ ಬರೆದು ನನ್ನಲ್ಲಿ ಕೊಂಬು ಮೂಡಿಸಿದರು. ಹೀಗಾಗಿ ಕಷ್ಟಪಟ್ಟು ಅದೇ ಹೆಸರಿನ ಕಾದಂಬರಿ ಬರೆದೆ. ಪ್ರಕಾಶಕರೂ ಸಿಕ್ಕರು. ಜನಪ್ರಿಯ ಚಲನಚಿತ್ರವೂ ಆಗಿಬಿಟ್ಟಿತು. ಎಲ್ಲಾ ಅನಿರೀಕ್ಷಿತಗಳೆ. ನನ್ನ ಆರನೇ ಕತೆ 'ದೊಡ್ಡಮನೆ'. 'ದೊಡ್ಡಮನೆ ಎಸ್ಟೇಟ್' ಹೆಸರಿನಲ್ಲಿ ಚಿತ್ರವಾವಾದಾಗ ನಾನೇ ಹುಬ್ಬೇರಿಸುವಂತಾಗಿತ್ತು. ಚಿತ್ರಕ್ಕೆ ಸಂಭಾಷಣೆ ಬರೆದವರು ಕವಿ ಎಚ್.ಎಸ್. ವೆಂಕಟೇಶಮೂರ್ತಿ. ಚಿತ್ರ ಬಿಡುಗಡೆಯಾಗಿ ಅಟ್ಟರ್ ಫ್ಲಾಪ್ ಆಯಿತು. ಬೆಲ್ಚಿ ಸಿಪ್ರಾ ನಾರಾಯಣಪುರದಲ್ಲಿ ದಲಿತರನ್ನು ಕೋಳಿಗಳಂತೆ ಉರಿವ ಬೆಂಕಿಗೆ ಎಸೆದು ಜೀವಸಹಿತ ಸುಟ್ಟರೆಂಬ ಪುಟ್ಟ ಪತ್ರಿಕಾ ವರದಿಯಿಂದ ಪ್ರಭಾವಿತನಾಗಿ ಬರೆದ 'ಅತಂತ್ರರು' 'ಸುಧಾ' ಕಾದಂಬರಿ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಗಳಿಸಿ ನನಗೆ ಕಾದಂಬರಿಕಾರನ ಪಟ್ಟ ಕಾಯಂ ಮಾಡಿತೆನ್ನಬಹುದು. ಇಷ್ಟಾಗಿಯೂ 'ಪ್ರಜಾವಾಣಿ'ಯಲ್ಲಿ ನನ್ನ ಕತೆಗಳು ಹಿಂದಿರುಗಿ ಬರುವ ವೇಗ ನಿಂತಿರಲಿಲ್ಲ. ನಮ್ಮೂರಿನ ಬಿ.ವಿ. ವೈಕುಂಠರಾಜು ಅವರೇ ಆಗ ಸಾಪ್ತಾಹಿಕ ಪುರವಣಿ ಸಂಪಾದಕರು. ಅವರೊಡನೆ ಸೌಹಾರ್ದ ಒಡನಾಟವೇ ಇದ್ದಿತು (ಕೊನೆಯವರೆಗೂ). ಅವರು 'ಪ್ರಜಾವಾಣಿ' ಬಿಟ್ಟ ನಂತರವೇ ನನ್ನ ಕತೆಗಳು 'ಪ್ರಜಾವಾಣಿ'ಯಲ್ಲಿ ಬೆಳಕುಕಂಡದ್ದು. ಅಷ್ಟೇ ಅಲ್ಲ, 2001ರ 'ಪ್ರಜಾವಾಣಿ' ದೀಪಾವಳಿ ಕಥಾಸ್ಪರ್ಧೆಯಲ್ಲಿ 'ಸುಡುಗಾಡು ಸಿದ್ಧನ ಪ್ರಸಂಗ' ಎಂಬ ಕತೆ ನನಗೆ ಪ್ರಥಮ ಬಹುಮಾನವನ್ನೂ ತಂದುಕೊಟ್ಟಿತೆನ್ನಿ. ಇದನ್ನೆಲ್ಲಾ ಏಕೆ ಹೇಳುತ್ತಿದ್ದೇನೆಂದರೆ ಹೊಸದಾಗಿ ಬರೆಯಲು ಆರಂಭಿಸಿದ ಲೇಖಕರು ಯಾವ ಕಾರಣಕ್ಕೂ ನಿರಾಶರಾಗುವ ಅಗತ್ಯವಿಲ್ಲ. ಸತತ ಅಧ್ಯಯನ, ಪರಿಶ್ರಮ ಹಾಕಿದರೆ ಪ್ರತಿಫಲ ಖಚಿತ. ನಿಮ್ಮ ಎಷ್ಟೋ ಕತೆಗಳು ಪ್ರಕಟವಾಗದಿರಬಹುದು. ಅದು ನಿಮಗೆ ಮಾತ್ರ ಗೊತ್ತುಂಟು. ಅಕಸ್ಮಾತ್ ಒಂದು ಕತೆ ಪ್ರಕಟವಾದರೆ ಲಕ್ಷಾಂತರ ಮಂದಿ ಓದುತ್ತಾರಲ್ಲವೆ. ಆ ಛಲ, ಆಶೆ ಇರಬೇಕು. ಕತೆಗಾರನಿಗೆ ಅಧ್ಯಯನ ಬದ್ಧತೆ, ತಾತ್ವಿಕತೆ, ಸಮಾಜಮುಖಿ ದೃಷ್ಟಿಕೋನದೊಡನೆ ಮನುಷ್ಯ ಸಂಬಂಧಗಳ ಬಗ್ಗೆ ಅತೀವ ಪ್ರೀತಿ, ಕಾಳಜಿ ಇರಬೇಕಾಗುತ್ತದೆ. ಸಣ್ಣಕತೆ ಕೇವಲ ವಿಷಾದವನ್ನು